ಕರ್ನಾಟಕ ಸರ್ಕಾರ

ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ.

**HASSAN INSTITUTE OF MEDICAL SCIENCES, HASSAN**

**(An Autonomous Medical Institution, Government of Karnataka )**

**SRI CHAMARAJENDRA HOSPITAL CAMPUS, HASSAN-573201**

**Website: www.hims-hassan.org, Phone/Fax No.08172-231699/ 231599 , Email: directorhims@yahoo.com**

# 25 ನೇ ಆಡಳಿತ ಸಮಿತಿ ಸಭೆಯ ಸಭಾ ನಡವಳಿಗಳು

**ದಿನಾಂಕ: 26-11-2015ನೇ ಗುರುವಾರ,**

**ಮಧ್ಯಾಹ್ನ:3-00ಗಂಟೆಗೆ**

**:ಸ್ಥಳ:**

**ಕೊಠಡಿ ಸಂಖ್ಯೆ: 301, 3ನೇ ಮಹಡಿ,**

**ವಿಧಾನ ಸೌಧ, ಬೆಂಗಳೂರು.**

# 25ನೇ ಆಡಳಿತ ಮಂಡಳಿ ಸಭೆಯ ಸಭಾ ನಡವಳಿಗಳು

ದಿನಾಂಕ:26-11-2015 ಗುರುವಾರ, ಮಧ್ಯಾಹ್ನ:3.00ಗಂಟೆಗೆ ಕೊಠಡಿ ಸಂಖ್ಯೆ:301, 3ನೇ ಮಹಡಿ, ವಿಧಾನ ಸೌಧ, ಬೆಂಗಳೂರು ಇಲ್ಲಿ ಸನ್ಮಾನ್ಯ ಡಾ.ಶರಣಪ್ರಕಾಶ್ ರುದ್ರಪ್ಪ ಪಾಟೀಲ್, ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು, ಕರ್ನಾಟಕ ಸರ್ಕಾರ ಹಾಗೂ ಅಧ್ಯಕ್ಷರು, ಆಡಳಿತ ಮಂಡಳಿ, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ ಇವರ ಘನ ಅಧ್ಯಕ್ಷತೆಯಲ್ಲಿ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 25ನೇ ಆಡಳಿತ ಮಂಡಳಿ ಸಭೆ ಸೇರಿ ನಡೆಸಿದ ಸಭಾ ನಡವಳಿಗಳು.

**ಒಟ್ಟು ಸದಸ್ಯರ ಸಂಖ್ಯೆ:08** **ಹಾಜರಿದ್ದ ಸದಸ್ಯರ ಸಂಖ್ಯೆ:04**

| | | | |
|---|---|---|---|
| 01 | ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು, ಕರ್ನಾಟಕ ಸರ್ಕಾರ ಹಾಗೂ ಅಧ್ಯಕ್ಷರು, ಆಡಳಿತ ಮಂಡಳಿ, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ | ಅಧ್ಯಕ್ಷರು | ಹಾಜರಿರುತ್ತಾರೆ |
| 02 | ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, (ವೈದ್ಯಕೀಯ ಶಿಕ್ಷಣ), ಕರ್ನಾಟಕ ಸರ್ಕಾರ, ವಿಕಾಸ ಸೌಧ, ಬೆಂಗಳೂರು. | ಉಪಾಧ್ಯಕ್ಷರು | ಹಾಜರಿರುತ್ತಾರೆ |
| 03 | ಮಾನ್ಯ ಕುಲಪತಿಗಳು, ರಾಜೀವ್ ಗಾಂಧಿ, ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಕರ್ನಾಟಕ ಸರ್ಕಾರ, ಬೆಂಗಳೂರು. | ಸದಸ್ಯರು | -- |
| 04 | ಮಾನ್ಯ ಪ್ರಧಾನಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು. | ಸದಸ್ಯರು | -- |
| 05 | ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ, ವಿಕಾಸ ಸೌಧ, ಬೆಂಗಳೂರು. | ಸದಸ್ಯರು | -- |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| | | | |
|---|---|---|---|
| 06 | ಮಾನ್ಯ ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ಆನಂದರಾವ್ ವೃತ್ತ, ಬೆಂಗಳೂರು. | ಸದಸ್ಯರು | ಹಾಜರಿರುತ್ತಾರೆ |
| 07 | ಮಾನ್ಯ ಜಿಲ್ಲಾಧಿಕಾರಿಗಳು, ಹಾಸನ ಜಿಲ್ಲೆ, ಹಾಸನ. | ಸದಸ್ಯರು | -- |
| 08 | ಮಾನ್ಯ ನಿರ್ದೇಶಕರು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯ ಕಾರ್ಯದರ್ಶಿ | ಹಾಜರಿರುತ್ತಾರೆ |

| ಅಜೆಂಡಾ ಕ್ರ.ಸಂ. | ವಿಷಯ | ತೀರ್ಮಾನ |
|---|---|---|
| 1 | ದಿನಾಂಕ:10-06-2015 ರಂದು ನಡೆದ 23ನೇ ಆಡಳಿತ ಮಂಡಳಿ ಸಭೆಯ ಸಭಾ ನಡವಳಿಗಳ ಅನುಪಾಲನಾ ವರದಿಯನ್ನು ಓದಿ ಅನುಮೋದಿಸುವುದು. | ದಿನಾಂಕ:10-06-2015ರಂದು ನಡೆದ 23ನೇ ಆಡಳಿತ ಮಂಡಳಿ ಸಭೆಯಲ್ಲಿ ವಿಷಯವಾರು ಚರ್ಚಿಸಿ ತೆಗೆದುಕೊಂಡ ತೀರ್ಮಾನಗಳ ಅನುಪಾಲನಾ ವರದಿಯನ್ನು ಸಭೆಯಲ್ಲಿ ಓದಿ ಅಂಗೀಕರಿಸಲಾಯಿತು.<br>ಸದರಿ ತೀರ್ಮಾನಗಳ ಪೈಕಿ **ಅಜೆಂಡಾ ಕ್ರಮ ಸಂಖ್ಯೆ:20ರಲ್ಲಿ** ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಅಧೀನದಲ್ಲಿರುವ ಶುಶ್ರೂಷ ಮಹಾವಿದ್ಯಾಲಯ, ಹಾಸನ ಮತ್ತು ಹೊಳೆನರಸೀಪುರ ಇಲ್ಲಿಗೆ ಮಂಜೂರಾಗಿರುವ ವಿವಿಧ ಬೋಧಕೇತರ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಚರ್ಚಿಸಲಾಗಿದ್ದು, ಆಕುಕ ಇಲಾಖೆಯಲ್ಲಿ 'ಸಿ' ಮತ್ತು 'ಡಿ' ದರ್ಜೆಯ ಹುದ್ದೆಗಳನ್ನು ಭರ್ತಿ ಮಾಡಲು ಅನುಸರಿಸುತ್ತಿರುವ ಸಿ & ಆರ್ ನಿಯಮಗಳನ್ನು ಯತಾವತ್ತಾಗಿ ಅಳವಡಿಸಿಕೊಂಡು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆ.ಇ.ಎ) ಮೂಲಕ ಕೆ.ಸಿ.ಎಸ್.ಆರ್ ನಿಯಮಗಳಡಿ ಭರ್ತಿ ಮಾಡಿಕೊಳ್ಳಲು ತೀರ್ಮಾನ ಕೈಗೊಳ್ಳಲಾಗಿರುತ್ತದೆ.<br>ಆಡಳಿತ ಮಂಡಳಿಯ ತೀರ್ಮಾನದಂತೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆ.ಇ.ಎ) ಮೂಲಕ ಬೋಧಕೇತರ ಸಿಬ್ಬಂದಿಗಳನ್ನು ನೇಮಕಾತಿ ಮಾಡಿಕೊಳ್ಳಲು ಅನುಮತಿಗಾಗಿ ಸರ್ಕಾರಕ್ಕೆ ಏಕ ಕಡತದಲ್ಲಿ ಅನುಮತಿಗಾಗಿ ಕೋರಲಾಗಿರುತ್ತದೆ. ಸರ್ಕಾರದ ಉಪ ಕಾರ್ಯದರ್ಶಿಗಳು, ಆಕುಕ, ವೈಶಿರವರು 371(ಜೆ) ಅಳವಡಿಸಿಕೊಂಡಿರುವುದರ ಬಗೆ ವರದಿ ಕೇಳಿ ಕಡತವನ್ನು ಹಿಂದಿರುಗಿಸಿರುತ್ತಾರೆ. ಜೊತೆಗೆ ಈಗಾಗಲೇ ಸದರಿ ಸಂಸ್ಥೆಗಳಿಗೆ ಅಗತ್ಯವಿರುವ ಬೋಧಕ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸುವಂತೆ ಕೆ.ಇ.ಎಯವರಿಗೆ ಪತ್ರ ಬರೆಯಲಾಗಿದ್ದು, ಈ ಹುದ್ದೆಗಳನ್ನು ಭರ್ತಿ ಮಾಡಲು ಸಾಧ್ಯವಿರುವುದಿಲ್ಲವೆಂದು ತಿಳಿಸಿರುತ್ತಾರೆಂಬುದರ ಅನುಪಾಲನ ವರದಿಯನ್ನು ಸಂಸ್ಥೆಯ ನಿರ್ದೇಶಕರು ಸಭೆಯ ಮುಂದೆ ಮಂಡಿಸಿದರು. |



ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ.ಸಂ. | ವಿಷಯ | ತೀರ್ಮಾನ |
|---|---|---|
| | | ಅನುಪಾಲನಾ ವರದಿಯ ಬಗ್ಗೆ ಚರ್ಚಿಸಿ ಶುಶ್ರೂಷ ಮಹಾವಿದ್ಯಾಲಯ, ಹಾಸನ ಮತ್ತು ಹೊಳೆನರಸೀಪುರ ಈ ಸಂಸ್ಥೆಗಳ ಆಡಳಿತ ಹಿತದೃಷ್ಟಿಯಿಂದ ಖಾಲಿ ಇರುವ ಬೋಧಕೇತರ ಹುದ್ದೆಗಳನ್ನು ತಾತ್ಕಾಲಿಕವಾಗಿ ಹೊರಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಳ್ಳುವುದೆಂದು ತೀರ್ಮಾನಿಸಿ ಇದರ ಬಗ್ಗೆ ಅಗತ್ಯ ಕ್ರಮವಹಿಸುವಂತೆ ಸಂಸ್ಥೆಯ ನಿರ್ದೇಶಕರಿಗೆ ಸೂಚಿಸಲಾಯಿತು. |
| 2 | ದಿನಾಂಕ:11-09-2015ರಂದು ನಡೆದ 24ನೇ ಆಡಳಿತ ಮಂಡಳಿ ಸಭೆಯ ಸಭಾ ನಡವಳಿಗಳ ಅನುಪಾಲನಾ ವರದಿಯನ್ನು ಓದಿ ಅನುಮೋದಿಸುವುದು. | ದಿನಾಂಕ:11-09-2015ರಂದು ನಡೆದ 24ನೇ ಆಡಳಿತ ಮಂಡಳಿ ಸಭೆಯಲ್ಲಿ ವಿಷಯವಾರು ಚರ್ಚಿಸಿ ತೆಗೆದುಕೊಂಡ ತೀರ್ಮಾನಗಳ ಅನುಪಾಲನಾ ವರದಿಯನ್ನು ಸಭೆಯಲ್ಲಿ ಓದಿ ಅಂಗೀಕರಿಸಲಾಯಿತು. |
| 3 | ದಿನಾಂಕ:03-11-2015ರಂದು ನಡೆದ 8ನೇ ಕಾಮಗಾರಿ ಸಮಿತಿ ಸಭೆಯ ಸಭಾ ನಡವಳಿಗಳನ್ನು ಓದಿ ಅಂಗೀಕರಿಸುವುದು. | ದಿನಾಂಕ:03-11-2015ರಂದು ನಡೆದ 8ನೇ ಕಾಮಗಾರಿ ಸಮಿತಿ ಸಭೆಯಲ್ಲಿ ವಿಷಯವಾರು ಚರ್ಚಿಸಿ ತೆಗೆದುಕೊಂಡ ತೀರ್ಮಾನಗಳ ಅನುಪಾಲನಾ ವರದಿಯನ್ನು ಸಭೆಯಲ್ಲಿ ಓದಿ ಅಂಗೀಕರಿಸಲಾಯಿತು. ಸದರಿ ತೀರ್ಮಾನಗಳ ಪೈಕಿ **ಅಜೆಂಡಾ ಕ್ರಮ ಸಂಖ್ಯೆ:05ರಲ್ಲಿ** ಸಂಸ್ಥೆಯ ಹೊಸ ಆಸ್ಪತ್ರೆಯ ಕಟ್ಟಡದಲ್ಲಿ ಸಾರ್ವಜನಿಕರು ಓಡಾಡುವ ಕೆಲವೊಂದು ಸ್ಥಳಗಳಲ್ಲಿ ದೊಡ್ಡದಾದ ಗ್ಲಾಸ್ ಕಿಟಕಿಗಳನ್ನು ಅಳವಡಿಸಿದ್ದು ಗ್ಲಾಸ್‌ಗಳನ್ನು ಒಡೆದು ಹೊರಹೋಗುವಂತಹ ಅಥವಾ ಜನರು ಬೀಳುವ ಸಾಧ್ಯತೆ ಇರುವುದರಿಂದ ಎಲ್ಲಾ ಅಂತಸ್ತುಗಳ ಕಿಟಕಿಗಳಿಗೆ ಗ್ರಿಲ್ಸ್ ಅಳವಡಿಸುವ ಬಗ್ಗೆ ಅನುಮೋದನೆಗಾಗಿ ವಿಷಯವನ್ನು ಮಂಡಿಸಲಾಗಿದ್ದು, ಎರಡು ಅಂತಸ್ತುಗಳಿಗೆ ಮಾತ್ರ ಕಬ್ಬಿಣದ ಗ್ರಿಲ್ಸ್ ಅಳವಡಿಸುವುದೆಂದು ಕಾಮಗಾರಿ ಸಮಿತಿಯಲ್ಲಿ ತೀರ್ಮಾನಿಸಲಾಗಿರುತ್ತದೆ. ಎಂಬುದರ ಬಗ್ಗೆ ಅನುಪಾಲನಾ ವರದಿಯನ್ನು ಸಭೆಯಲ್ಲಿ ಮಂಡಿಸಿದರು.<br>ಮುಂದುವರೆದು ಹೊಸ ಆಸ್ಪತ್ರೆಯ ಪ್ರಯೋಗಿಕ ಸಂದರ್ಭದಲ್ಲಿ ಮೂರನೇ ಮಹಡಿಯಿಂದ ಒಬ್ಬ ರೋಗಿಯು ಬಿದ್ದಂತಹ ಅವಘಾಡದ ಬಗ್ಗೆ ಸಂಸ್ಥೆಯ ನಿರ್ದೇಶಕರು ಸಭೆಯ ಅವಗಾಹನೆಗೆ ತರಲಾಗಿ ಸಾರ್ವಜನಿಕರು ಮತ್ತು ರೋಗಿಗಳ ಹಿತದೃಷ್ಟಿಯಿಂದ ಅಗತ್ಯವಿರುವ ಎಲ್ಲಾ ಕಡೆ ಭದ್ರತೆಗಾಗಿ ಗ್ರಿಲ್ಸ್ ಅಳವಡಿಸುವುದೆಂದು ತೀರ್ಮಾನಿಸಿ ಸದರಿ ಗ್ರಿಲ್ಸ್ ಅಳವಡಿಕೆಗೆ ಕೆ.ಹೆಚ್.ಎಸ್.ಡಿ.ಆರ್.ಪಿ., ಉಪ ವಿಭಾಗ, ಹಾಸನ ಸ್ಥಳ ಪರಿಶೀಲನೆ ನಡೆಸಿ ಸುಮಾರು 90 ಕಿಟಕಿಗಳಿಗೆ ಗ್ರಿಲ್ಸ್‌ಗಳನ್ನು ಅಳವಡಿಸುವ ಕೆಲಸಕ್ಕೆ ಸಲ್ಲಿಸಿರುವ ರೂ.35.00 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ಒಪ್ಪಿ ಈ ವೆಚ್ಚವನ್ನು ಯೂಸರ್ಸ್ |



ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ.ಸಂ. | ವಿಷಯ | ತೀರ್ಮಾನ |
|---|---|---|
| | | ನಿಧಿಯಿಂದ ಭರಿಸುವುದೆಂದು ತೀರ್ಮಾನಿಸಲಾಯಿತು. ಇದರ ಬಗ್ಗೆ ಅಗತ್ಯ ಕ್ರಮವಹಿಸುವಂತೆ ಸಂಸ್ಥೆಯ ನಿರ್ದೇಶಕರಿಗೆ ತಿಳಿಸಲಾಯಿತು. |
| 4 | ದಿನಾಂಕ:03-11-2015ರಂದು ನಡೆದ 12ನೇ ಆರ್ಥಿಕ ಸಮಿತಿ ಸಭೆಯ ನಡವಳಿಗಳನ್ನು ಓದಿ ಅಂಗೀಕರಿಸುವುದು. | ದಿನಾಂಕ:03-11-2015ರಂದು ನಡೆದ 12ನೇ ಆರ್ಥಿಕ ಸಮಿತಿ ಸಭೆಯಲ್ಲಿ ವಿಷಯವಾರು ಚರ್ಚಿಸಿ ತೆಗೆದುಕೊಂಡ ತೀರ್ಮಾನಗಳ ಅನುಪಾಲನಾ ವರದಿಯನ್ನು ಸಭೆಯಲ್ಲಿ ಓದಿ ಅಂಗೀಕರಿಸಲಾಯಿತು. ಸದರಿ ತೀರ್ಮಾನಗಳ ಪೈಕಿ ಈ ಕೆಳಕಂಡ ಅಜೆಂಡಾಗಳನ್ನು ಪುನರ್ ಚರ್ಚಿಸಲಾಯಿತು.<br>**<u>ಅಜೆಂಡಾ ಕ್ರಮ ಸಂಖ್ಯೆ:20</u>** ಯಶಸ್ವಿನಿ ಯೋಜನೆ ಮತ್ತು ವಿವಿಧ ಆರೋಗ್ಯ ಯೋಜನೆಗಳ ಕೆಲಸ ನಿರ್ವಹಿಸಲು 03 ಜನ ಡಾಟಾ ಎಂಟ್ರಿಆಪರೇಟರ್‌ಗಳನ್ನು ಕ್ರೋಢೀಕೃತ ವೇತನದಡಿಯಲ್ಲಿ ನೇಮಿಸಿಕೊಳ್ಳಲು ಅನುಮತಿ ನೀಡುವ ಬಗ್ಗೆ ವಿಷಯವನ್ನು ಮಂಡಿಸಲಾಗಿದ್ದು. ಸಂಸ್ಥೆಗೆ ಮಂಜೂರಾಗಿರುವ ಹುದ್ದೆಗಳಲ್ಲಿ ಈ ಹುದ್ದೆಗಳು ಖಾಲಿ ಇರುವ ಬಗ್ಗೆ ಪರಿಶೀಲಿಸಿ ಖಾಲಿ ಇದ್ದಲ್ಲಿ ಮಾತ್ರ 03 ಡಾಟಾ ಎಂಟ್ರಿ ಆಪರೇಟರ್‌ಗಳನ್ನು ಕ್ರೋಢೀಕೃತ ವೇತನದಡಿಯಲ್ಲಿ ನೇಮಿಸಿಕೊಳ್ಳಬಹುದೆಂದು ತೀರ್ಮಾನಿಸಲಾಗಿರುತ್ತದೆ ಎಂಬುದರ ಬಗ್ಗೆ ಅನುಪಾಲನಾ ವರದಿಯನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಸದರಿ ವಿಷಯದ ಬಗ್ಗೆ ಚರ್ಚಿಸಿ ಕ್ರೋಢೀಕೃತ ವೇತನದಡಿಯಲ್ಲಿ ನೇಮಿಸಿಕೊಳ್ಳುವ ಬದಲು 03 ಡಾಟಾ ಎಂಟ್ರಿ ಆಪರೇಟರ್‌ಗಳನ್ನು ಹೊರಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಂಡು ಸದರಿ ಕಾರ್ಮಿಕರಿಗೆ ಕನಿಷ್ಠ ವೇತನ ನಿಯಮಕ್ಕೆ ಅನುಸಾರವಾಗಿ ವೇತನ ಪಾವತಿಸುವುದೆಂದು ತೀರ್ಮಾನಿಸಲಾಯಿತು. |
| | | **<u>ಅಜೆಂಡಾ ಕ್ರಮ ಸಂಖ್ಯೆ:21</u>** ಸಂಸ್ಥೆಯಲ್ಲಿ ಸ್ನಾತಕೋತ್ತರ ಪದವಿ ಪ್ರಾರಂಭಿಸಲು ಎಮ್.ಸಿ.ಐ. ನಿಂದ ಪರಿವೀಕ್ಷಣೆ ನಡೆದಿದ್ದು ವರದಿಯಲ್ಲಿ ಎಮ್.ಆರ್.ಐ.ಸ್ಕ್ಯಾನಿಂಗ್ ಯಂತ್ರವನ್ನು ಅಳವಡಿಸಿಲ್ಲವೆಂದು ಆಕ್ಷೇಪಿಸಿರುತ್ತಾರೆ. ಸಂಸ್ಥೆ ವತಿಯಿಂದ ಎಮ್.ಆರ್.ಐ. ಸ್ಕ್ಯಾನಿಂಗ್ ಯಂತ್ರವನ್ನು ಖರೀದಿಸಿದಲ್ಲಿ ಸುಮಾರು ರೂ.500.00 ಲಕ್ಷ ಅನುದಾನದ ಅವಶ್ಯಕತೆಯ ಜೊತೆಗೆ ರೇಡಿಯಾಲಜಿಸ್ಟ್ ಹುದ್ದೆಗಳನ್ನು ಸಹ ಭರ್ತಿ ಮಾಡಬೇಕಾಗುತ್ತದೆ. ಇದಕ್ಕೆ ಪರ್ಯಾಯ ವ್ಯವಸ್ಥೆಯಾಗಿ ಪಿ.ಪಿ.ಪಿ ಮೂಲಕ ಎಮ್.ಆರ್.ಐ. ಯಂತ್ರವನ್ನು ಅಳವಡಿಸಿಕೊಂಡಲ್ಲಿ ಸಂಸ್ಥೆಗೆ ಆರ್ಥಿಕ ಹೊರೆಯಾಗುವುದಿಲ್ಲ ಮತ್ತು ಪಿ.ಪಿ.ಪಿ ಪಡೆಯುವ ಸಂಸ್ಥೆಯವರೇ ರೇಡಿಯಾಲಜಿಸ್ಟ್‌ಗಳನ್ನು ನೇಮಕ ಮಾಡಿಕೊಳ್ಳುವುದರಿಂದ ಪಿ.ಪಿ.ಪಿ ಮೂಲಕ ಎಮ್.ಆರ್.ಐ. ಯಂತ್ರವನ್ನು ಅಳವಡಿಸಿಕೊಳ್ಳಬಹುದೆಂದು ಆರ್ಥಿಕ ಸಮಿತಿ |



ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ.ಸಂ. | ವಿಷಯ | ತೀರ್ಮಾನ |
|---|---|---|
| | | ಸಭೆಯಲ್ಲಿ ಚರ್ಚಿಸಿ ಅನುಮೋದನೆ ಪಡೆಯಲಾಗಿರುತ್ತದೆಂದು ಸಂಸ್ಥೆಯ ನಿರ್ದೇಶಕರು ಸಭೆಯಲ್ಲಿ ವಿಷಯವನ್ನು ಮಂಡಿಸಿದರು.<br>ಸದರಿ ವಿಷಯವನ್ನು ಕೂಲಂಕಷವಾಗಿ ಚರ್ಚಿಸಿ ಪಿ.ಪಿ.ಪಿ ಮೂಲಕ ಎಮ್.ಆರ್.ಐ ಸ್ಕ್ಯಾನಿಂಗ್ ಅಳವಡಿಸಿಕೊಳ್ಳುವುದು ಬೇಡವೆಂದು ತೀರ್ಮಾನಿಸಿ ಎಮ್.ಆರ್.ಐ. ಸ್ಕ್ಯಾನಿಂಗ್‌ಗೆ ಅವಶ್ಯಕವಿರುವ ಅನುದಾನಕ್ಕೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಅನುದಾನ ಬಿಡುಗಡೆಯಾದ ನಂತರ ಸಂಸ್ಥೆಯವತಿಯಿಂದಲೇ ಖರೀದಿಸುವುದೆಂದು ತೀರ್ಮಾನಿಸಲಾಯಿತು. |
| 5 | ವಿವಿಧ ಸ್ವಾಯತ್ತ ಸಂಸ್ಥೆಗಳಲ್ಲಿ ಮತ್ತು ಹಿಮ್ಸ್ ಸಂಸ್ಥೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಶುಶ್ರೂಷಕರ ವರ್ಗಾವಣೆ ಬಗ್ಗೆ ಸರ್ಕಾರದಿಂದ ಬಂದಿರುವ ಪತ್ರ ಬಗ್ಗೆ. | ವಿವಿಧ ಸ್ವಾಯತ್ತ ಸಂಸ್ಥೆಗಳಲ್ಲಿ ಮತ್ತು ಹಿಮ್ಸ್ ಸಂಸ್ಥೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಶುಶ್ರೂಷಕರು ವರ್ಗಾವಣೆ ಕೋರಿ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದು, ಸದರಿ ನೌಕರರುಗಳ ಮನವಿಯನ್ನು ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸಿ ನಿರ್ಣಯ ಕೈಗೊಳ್ಳುವಂತೆ ಸರ್ಕಾರದ ಪತ್ರ ಸಂಖ್ಯೆ:1) ಆಕುಕ 138 ಕೆವಿಎಂ 2015, ದಿನಾಂಕ:05-06-2015<br>2) ಆಕುಕ 136 ಕೆವಿಎಂ 2015, ದಿನಾಂಕ:11-06-2015<br>3) ಆಕುಕ 266 ಎಂಎಂಇ 2015, ದಿನಾಂಕ:03-09-2015<br>4) ಆಕುಕ 149 ಕೆವಿಎಂ 2015, ದಿನಾಂಕ:25-06-2015<br>ಸರ್ಕಾರದಿಂದ ಬಂದಿರುವ ನಿರ್ದೇಶನದ ಬಗ್ಗೆ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಿ ಈ ಕೆಳಕಂಡ ನೌಕರರುಗಳನ್ನು ಕೋರಿರುವ ಸ್ಥಳಗಳಿಗೆ ವರ್ಗಾವಣೆ ಮಾಡಬಹುದೆಂದು ತೀರ್ಮಾನಿಸಲಾಯಿತು. |

| ಕ್ರ.ಸಂ. | ಹೆಸರು | ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳ | ವರ್ಗಾವಣೆ ಕೋರಿರುವ ಸ್ಥಳ |
|---|---|---|---|
| 01 | ಶ್ರೀಮತಿ ಪುಷ್ಪ.ಕೆ.ಪಿ. ಶುಶ್ರೂಷಕರು | ಕರ್ನಾಟಕ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹುಬ್ಬಳ್ಳಿ | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ |
| 02 | ಶ್ರೀಮತಿ. ಸರೋಜ.ಬಿ.ಆರ್. ಶುಶ್ರೂಷಕರು | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ | ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು |
| 03 | ಶ್ರೀಮತಿ ಶೋಭಾ. ಎಸ್.ವಿ. ಶುಶ್ರೂಷಕರು | ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರು | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ |



ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

<table>
<tr><th>ಅಜೆಂಡಾ ಕ್ರ.ಸಂ.</th><th>ವಿಷಯ</th><th>ತೀರ್ಮಾನ</th></tr>
<tr><td></td><td></td><td><table><tr><td>04</td><td>ಶ್ರೀಮತಿ ಹರಣಿ.ಎಸ್. ಶುಶ್ರೂಷಕರು</td><td>ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರು</td><td>ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ</td></tr></table></td></tr>
<tr><td>6</td><td>ಡಾ.ಎ.ಜೆ.ಲೋಕೇಶ್, ಸಹ ಪ್ರಾಧ್ಯಾಪಕರು, ವೈದ್ಯಶಾಸ್ತ್ರ ವಿಭಾಗ, ಹಿಮ್ಸ್, ಹಾಸನರವರು ತಮ್ಮ ಹುದ್ದೆಗೆ ರಾಜೀನಾಮೆಯನ್ನು ಸಲ್ಲಿಸಿದ್ದು, ಸದರಿಯವರ ರಾಜೀನಾಮೆಯನ್ನು ಅಂಗೀಕರಿಸುವ ಬಗ್ಗೆ.</td><td>ಡಾ.ಎ.ಜೆ.ಲೋಕೇಶ್, ಸಹ ಪ್ರಾಧ್ಯಾಪಕರು, ವೈದ್ಯಶಾಸ್ತ್ರ ವಿಭಾಗ, ಹಿಮ್ಸ್, ಹಾಸನರವರು ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಪ್ರಾಧ್ಯಾಪಕರ ಹುದ್ದೆಗೆ ಆಯ್ಕೆಯಾದ ಕಾರಣದಿಂದ ದಿನಾಂಕ:21-07-2015ರಂದು ಸಂಸ್ಥೆಗೆ ರಾಜೀನಾಮೆ ಸಲ್ಲಿಸಿದ್ದು, ಸದರಿಯವರನ್ನು ಕರ್ತವ್ಯದಿಂದ ಬಿಡುಗಡೆ ಮಾಡುವ ಬಗ್ಗೆ ಅನುಮತಿ ಕೋರಿ ಈ ಸಂಸ್ಥೆಯ ಏಕಕಡತದ ಸಂಖ್ಯೆ: ಹಿಮ್ಸ್/ಸಿ(1)ಬಿ/18/2015-16, ದಿನಾಂಕ:20-08-2015ರಲ್ಲಿ ಸರ್ಕಾರಕ್ಕೆ ಸಲ್ಲಿಸಲಾಗಿದ್ದು, ಕಡತದ ಟಿಪ್ಪಣಿ ಸಂಖ್ಯೆ:05ರಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, (ವೈ.ಶಿ), ಮತ್ತು ಟಿಪ್ಪಣಿ 06ರಲ್ಲಿ ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು, ಕರ್ನಾಟಕ ಸರ್ಕಾರ ಇವರು ಡಾ.ಎ.ಜೆ. ಲೋಕೇಶ್‌ರವರ ರಾಜೀನಾಮೆಯನ್ನು ಒಪ್ಪಿ ಸದರಿಯವರನ್ನು ಕರ್ತವ್ಯದಿಂದ ಬಿಡುಗಡೆ ಮಾಡಬಹುದೆಂದು ಅನುಮೋದಿಸಿದ್ದರಿಂದ ಆಡಳಿತ ಮಂಡಳಿ ಅನುಮೋದನೆಯ ಷರತ್ತಿಗೆ ಒಳಪಟ್ಟು ಡಾ.ಎ.ಜೆ. ಲೋಕೇಶ್ ರವರನ್ನು ಈ ಕಛೇರಿ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ:ಹಿಮ್ಸ್/ಸಿ(1)ಬಿ /18/ 2015-16 ದಿನಾಂಕ: 04-09-2015ರಂದು ಪೂರ್ವಾಹ್ನ ಕರ್ತವ್ಯದಿಂದ ಬಿಡುಗಡೆಗೊಳಿಸಲಾಗಿರುತ್ತದೆಂದು ಸಂಸ್ಥೆಯ ನಿರ್ದೇಶಕರು ಸಭೆಯಲ್ಲಿ ಮಂಡಿಸಿದರು.<br>ಡಾ.ಎ.ಜೆ.ಲೋಕೇಶ್, ಸಹ ಪ್ರಾಧ್ಯಾಪಕರು, ವೈದ್ಯಶಾಸ್ತ್ರ ವಿಭಾಗ, ಹಿಮ್ಸ್, ಹಾಸನರವರ ರಾಜೀನಾಮೆ ಪತ್ರವನ್ನು ಸರ್ವಾನುಮತದಿಂದ ಒಪ್ಪಿ ಅನುಮೋದಿಸಲಾಯಿತು.</td></tr>
<tr><td>7</td><td>ಶ್ರೀ.ಶಿವರಾಜ್. ಜಿ.ಎಸ್., ವರ್ಕ್‌ಶಾಪ್‌ವರ್ಕರ್ ಮತ್ತು ಶ್ರೀಮತಿ ಪ್ರತೀಮಾ ಮಹೋಬೆ ರೇಡಿಯೋಗ್ರಾಫರ್ (ರೇಡಿಯೇಷನ್ ಟೆಕ್ನಿಷಿಯನ್) ಇವರುಗಳು ತಮ್ಮ ಹುದ್ದೆಗೆ ರಾಜೀನಾಮೆ ಸಲ್ಲಿಸಿದ್ದು ಸದರಿ ನೌಕರರ ರಾಜೀನಾಮೆಯನ್ನು ಅಂಗೀಕರಿಸುವ ಬಗ್ಗೆ.</td><td>ಶ್ರೀ.ಶಿವರಾಜ್.ಜಿ.ಎಸ್., ವರ್ಕ್‌ಶಾಪ್‌ವರ್ಕರ್, ಇವರು ವೈಯಕ್ತಿಕ ನೆಲೆಯಲ್ಲಿ ದಿನಾಂಕ: 15-09-2014ರಂದು ತಮ್ಮ ಹುದ್ದೆಗೆ ರಾಜೀನಾಮೆ ಸಲ್ಲಿಸಿರುವುದನ್ನು ಮತ್ತು ಶ್ರೀಮತಿ ಪ್ರತೀಮಾ ಮಹೋಬೆ ರೇಡಿಯೋಗ್ರಾಫರ್ (ರೇಡಿಯೇಷನ್ ಟೆಕ್ನಿಷಿಯನ್) ಇವರು ದಿನಾಂಕ:24-07-2015ರಂದು ತಮ್ಮ ವೈಯಕ್ತಿಕ ನೆಲೆಯಲ್ಲಿ ತಾವು ನಿರ್ವಹಿಸುತ್ತಿದ್ದ ಹುದ್ದೆಗೆ ರಾಜೀನಾಮೆಯನ್ನು ಸಲ್ಲಿಸಿರುತ್ತಾರೆಂದು ಸಂಸ್ಥೆಯ ನಿರ್ದೇಶಕರು, ಸಭೆಯಲ್ಲಿ ಮಂಡಿಸಲಾಗಿ ಸದರಿ ನೌಕರರುಗಳ ರಾಜೀನಾಮೆಯನ್ನು ಸರ್ವಾನುಮತದಿಂದ ಒಪ್ಪಿ ಅಂಗೀಕರಿಸಲಾಯಿತು.</td></tr>
</table>

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ.ಸಂ. | ವಿಷಯ | ತೀರ್ಮಾನ |
|---|---|---|
| 8 | ಡಾ.ಹೆಚ್. ಸಿ.ಲೋಕೇಶ್. ಹಿರಿಯ ಸ್ಥಾನಿಯ ವೈದ್ಯರು ಇವರ ಖಾಯಂ ಪೂರ್ವಅವಧಿ ಘೋಷಣೆಯ ಬಗ್ಗೆ ಈಗಾಗಲೇ ಸರ್ಕಾರದಿಂದ ಅನುಮತಿ ದೊರೆತಿರುವುದನ್ನು ಅಂಗೀಕರಿಸುವ ಬಗ್ಗೆ. | ಸರ್ಕಾರದ ಪತ್ರ ಸಂಖ್ಯೆ:ಆಕುಕ 168 ಕೆವಿಎಂ 2015, ದಿನಾಂಕ:27.07.2015ರ ಆದೇಶದಲ್ಲಿ ಡಾ.ಹೆಚ್. ಸಿ.ಲೋಕೇಶ್. ಹಿರಿಯ ಸ್ಥಾನಿಯ ವೈದ್ಯರು, ಹಿಮ್ಸ್, ಹಾಸನ ಇವರ ಸೇವಾವಧಿಯನ್ನು ಘೋಷಿಸಲು ನಿರ್ದೇಶನ ನೀಡಿದ್ದರಿಂದ ಈ ಕಛೇರಿ ಪತ್ರ ಸಂಖ್ಯೆ:ಹಿಮ್ಸ್/ಸಿ(2)/03/2015-16, ದಿನಾಂಕ:28.07.2015 ರಂದು ಸದರಿಯವರು ಖಾಯಂ ಪೂರ್ವ ಸೇವಾವಧಿಯನ್ನು ತೃಪ್ತಿಕರವಾಗಿ ಪೂರೈಸಿದ್ದಾರೆಂದು ಘೋಷಿಸಲಾಗಿರುತ್ತದೆಂದು ನಿರ್ದೇಶಕರು ಸಭೆಯ ಮುಂದೆ ಮಂಡಿಸಿದರು. ಸದರಿಯವರ ಖಾಯಂ ಪೂರ್ವ ಸೇವಾವಧಿಯನ್ನು ಒಪ್ಪಿ ಅನುಮೋದಿಸಲಾಯಿತು. |
| 9 | ಡಾ. ಪವಿತ್ರ.ಪಿ. ಖಾಯಂ ಟ್ಯೂಟರ್, ಇವರ ಖಾಯಂ ಪೂರ್ವ ಸೇವಾವಧಿಯನ್ನು ಘೋಷಿಸುವ ಬಗ್ಗೆ. | ಡಾ. ಪವಿತ್ರ.ಪಿ., ಖಾಯಂ ಬೋಧಕರು, ಸಮುದಾಯ ವೈದ್ಯಶಾಸ್ತ್ರ ವಿಭಾಗ ರವರು ಕೆ.ಸಿ.ಎಸ್.ಆರ್. ನಿಯಮಾವಳಿಗಳು ಹಾಗೂ ಸಂಸ್ಥೆಯ ಬೈಲಾ ಪ್ರಕಾರ 02 ವರ್ಷ ತೃಪ್ತಿಕರವಾಗಿ ಕಾರ್ಯ ನಿರ್ವಹಿಸಿರುವುದರಿಂದ ಸದರಿಯವರ ಖಾಯಂ ಪೂರ್ವ ಸೇವಾವಧಿ ಘೋಷಿಸಬಹುದೆಂದು ತೀರ್ಮಾನಿಸಲಾಯಿತು. |
| 10 | ಡಾ.ಪ್ರವೀಣ್.ಜಿ., ಸಹ ಪ್ರಾಧ್ಯಾಪಕರು, ಸಮುದಾಯ ವೈದ್ಯಶಾಸ್ತ್ರ ವಿಭಾಗ ಮತ್ತು ಡಾ. ವಿನಯ್ ಕುಮಾರ್, ಸಹ ಪ್ರಾಧ್ಯಾಪಕರು, ಇ.ಎನ್.ಟಿ., ಹಿಮ್ಸ್, ಹಾಸನರವರು ವಿದೇಶ ಪ್ರವಾಸ ಕೈಗೊಂಡಿರುವುದನ್ನು ಅನುಮೋದಿಸುವ ಬಗ್ಗೆ. | ಡಾ. ಪ್ರವೀಣ್.ಜಿ., ಸಹ ಪ್ರಾಧ್ಯಾಪಕರು, ಸಮುದಾಯ ವೈದ್ಯಶಾಸ್ತ್ರ ವಿಭಾಗ ಮತ್ತು ಡಾ. ವಿನಯ್ ಕುಮಾರ್, ಸಹ ಪ್ರಾಧ್ಯಾಪಕರು, ಇ.ಎನ್.ಟಿ., ಹಿಮ್ಸ್, ಹಾಸನರವರು ತಮ್ಮ ಸ್ವಂತ ಖರ್ಚಿನಲ್ಲಿ ವಿದೇಶ ಪ್ರವಾಸ ಕೈಗೊಳ್ಳಲು ಅನುಮತಿ ಕೋರಿ ಸಂಸ್ಥೆಗೆ ಮನವಿ ಸಲ್ಲಿಸಿದ್ದು, ಸದರಿಯವರು ಈ ವರ್ಷದಲ್ಲಿ ಮೊದಲನೇ ಬಾರಿ ವಿದೇಶ ಪ್ರವಾಸ ಕೈಗೊಂಡಿರುವುದರಿಂದ ಅನುಮತಿ ಕೋರಿ ಸರ್ಕಾರಕ್ಕೆ ಹಿಮ್ಸ್/ಸಿಬ್ಬಂದಿ/11/2015-16, ದಿನಾಂಕ:27-06-2015 ಮತ್ತು ಹಿಮ್ಸ್ /ಸಿಬ್ಬಂದಿ/13/2015-16, ದಿನಾಂಕ:15-07-2015 ರಲ್ಲಿ ಏಕ ಕಡತದಲ್ಲಿ ಸಲ್ಲಿಸಲಾಗಿರುತ್ತದೆ. ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಹಾಗೂ ಅಧ್ಯಕ್ಷರು, ಆಡಳಿತ ಮಂಡಳಿ, ಹಿಮ್ಸ್, ಹಾಸನ ಮತ್ತು ಸರ್ಕಾರದ ಮಾನ್ಯ ಪ್ರಧಾನ ಕಾರ್ಯದರ್ಶಿಗಳು, (ವೈ.ಶಿ), ಹಾಗೂ ಉಪಾಧ್ಯಕ್ಷರು, ಆಡಳಿತ ಮಂಡಳಿ, ಹಿಮ್ಸ್, ಹಾಸನ. ಇವರು ಏಕ ಕಡತದಲ್ಲಿ ಅನುಮತಿ ನೀಡಿರುತ್ತಾರೆಂದು ಸಂಸ್ಥೆಯ ನಿರ್ದೇಶಕರು ಸಭೆಯ ಮುಂದೆ ಮಂಡಿಸಿದರು. ಸದರಿ ವೈದ್ಯರುಗಳು ವಿದೇಶಿ ಪ್ರವಾಸ ಕೈಗೊಳ್ಳುತ್ತಿರುವುದನ್ನು ಒಪ್ಪಿ ಅನುಮೋದಿಸಲಾಯಿತು. |
| 11 | ಡಾ. ಎನ್.ರಾಚೇಗೌಡ,ನಿವೃತ್ತ ನಿರ್ದೇಶಕರು, ಇವರ ವಿರುದ್ಧ ಕರ್ನಾಟಕ ಲೋಕಾಯುಕ್ತ ನ್ಯಾಯಾಲಯ, ಬೆಂಗಳೂರು ಇಲ್ಲಿ ವಿಚಾರಣೆ | ಡಾ.ಎನ್.ರಾಚೇಗೌಡ, ನಿವೃತ್ತ ನಿರ್ದೇಶಕರು, ಹಿಮ್ಸ್, ಹಾಸನರವರು ಮೈಸೂರಿನಲ್ಲಿ ರೇಡಿಯಾಲಜಿ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಆ ಸಂಸ್ಥೆಗೆ ಸರಬರಾಜಾದ ಕ್ಷ-ಕಿರಣ ಯಂತ್ರವು ಸಾಂಪ್ರದಾಯಿಕ ಯಂತ್ರವೇ ಅಥವಾ High |



ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ.ಸಂ. | ವಿಷಯ | ತೀರ್ಮಾನ |
|---|---|---|
| | ಹಂತದಲ್ಲಿರುವ ಬಗ್ಗೆ. | Frequency ಯದೇ ಎಂಬ ಬಗ್ಗೆ ಅನುಮಾನ ವ್ಯಕ್ತಪಡಿಸಿ, ಲೋಕಾಯುಕ್ತಕ್ಕೆ ದೂರು ನೀಡಿದ್ದರ ಬಗ್ಗೆ ಇವರ ವಿರುದ್ಧ ವಿಚಾರಣೆ ನಡೆಸಲು ಸರ್ಕಾರಿ ಆದೇಶ ಸಂಖ್ಯೆ: ಆಕುಕ 04 ಎಂಎಸ್‌ಎಫ್ 2015, ದಿನಾಂಕ:13.04.2015 ರಲ್ಲಿ ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರಿಗೆ ವಹಿಸಲಾಗಿದ್ದು, ಮಾನ್ಯ ಲೋಕಾಯುಕ್ತ, ಬೆಂಗಳೂರು ರವರು ಅವರ ಆದೇಶ ಸಂಖ್ಯೆ:LOK/DE/208/dated 20-04-2015ರ ಮೂಲಕ ತನಿಖೆ ಪ್ರಾರಂಭಿಸಿರುತ್ತಾರೆ. ಎಂಬ ವಿಷಯದ ಬಗ್ಗೆ ಸಭೆಯ ಅವಗಾಹನೆಗೆ ತರಲಾಗಿ ಮಾನ್ಯ ಲೋಕಾಯುಕ್ತರ ಅಂತಿಮ ತೀರ್ಪು ಬಂದ ನಂತರ ಚರ್ಚಿಸುವುದೆಂದು ತೀರ್ಮಾನಿಸಲಾಯಿತು. |
| 12 | ಹಿಮ್ಸ್ ಸಂಸ್ಥೆಯ ಅಧೀನದಲ್ಲಿರುವ ಹಾಸನ ಮತ್ತು ಹೊಳೆನರಸೀಪುರ ಸರ್ಕಾರಿ ಶುಶ್ರೂಷಾ ಮಹಾವಿದ್ಯಾಲಯಗಳಲ್ಲಿ ಐ.ಎನ್.ಸಿ. ನಿಯಮಾನುಸಾರ ಅಗತ್ಯವಿರುವ ಬೋಧಕರ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ. | ಶುಶ್ರೂಷಾ ಮಹಾವಿದ್ಯಾಲಯಗಳಿಗೆ ಐ.ಎನ್.ಸಿ. ನಿಯಮಾನುಸಾರ ಅಗತ್ಯವಿರುವ ಬೋಧಕರ ಹುದ್ದೆಗಳನ್ನು ಭರ್ತಿ ಮಾಡಲು ವೃಂದ ಮತ್ತು ನೇಮಕಾತಿ ನಿಯಮಗಳನ್ನು ಅಳವಡಿಸಿಕೊಳ್ಳುವ ಪ್ರಕ್ರಿಯೆಯು ಮಾನ್ಯ ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಇದರ ಅಂತಿಮ ಪರಿಶೀಲನೆಯಲ್ಲಿದ್ದು ಸಿ&ಆರ್ ನಿಯಮಗಳು ಅಂತಿಮಗೊಂಡ ನಂತರ ಸಿ&ಆರ್ ನಿಯಮಗಳ ಅನುಸಾರ ಖಾಲಿ ಇರುವ ಬೋಧಕ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸುವುದೆಂದು ತೀರ್ಮಾನಿಸಲಾಯಿತು. |
| 13 | ಶ್ರೀ ಹಾಸನಾಂಬ ದಂತ ಕಾಲೇಜು ಮತ್ತು ಆಸ್ಪತ್ರೆ, ಪಿ.ಜಿ. ನರ್ಸಿಂಗ್ ಸ್ಕೂಲ್ /ಕಾಲೇಜು, ಮತ್ತು ರಾಜೀವ್ ನರ್ಸಿಂಗ್ ಸ್ಕೂಲ್ / ಕಾಲೇಜು ಆಫ್ ನರ್ಸಿಂಗ್, ಹಾಸನ ವಿದ್ಯಾರ್ಥಿಗಳಿಗೆ, ಹಿಮ್ಸ್, ಬೋಧಕ ಆಸ್ಪತ್ರೆಯಲ್ಲಿ ಕ್ಲಿನಿಕಲ್ ಸೌಲಭ್ಯವನ್ನು ಒದಗಿಸುವ ಬಗ್ಗೆ ಸರ್ಕಾರದಿಂದ ಬಂದಿರುವ ಪತ್ರ ಬಗ್ಗೆ. | ಶ್ರೀ ಹಾಸನಾಂಬ ದಂತ ಕಾಲೇಜು ಮತ್ತು ಆಸ್ಪತ್ರೆ, ಪಿ.ಜಿ. ನರ್ಸಿಂಗ್ ಸ್ಕೂಲ್ /ಕಾಲೇಜು, ಮತ್ತು ರಾಜೀವ್ ನರ್ಸಿಂಗ್ ಸ್ಕೂಲ್ / ಕಾಲೇಜು ಆಫ್ ನರ್ಸಿಂಗ್, ಹಾಸನ ಇವರುಗಳು ತಮ್ಮ ಸಂಸ್ಥೆಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ, ಹಿಮ್ಸ್, ಬೋಧಕ ಆಸ್ಪತ್ರೆಯಲ್ಲಿ ಕ್ಲಿನಿಕಲ್ ಸೌಲಭ್ಯವನ್ನು ಒದಗಿಸುವ ಬಗ್ಗೆ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದು, ಸರ್ಕಾರದ ಪತ್ರ ಸಂಖ್ಯೆ:<br>ಆಕುಕ 152 ಆರ್‌ಜಿಯು/2014, ದಿನಾಂಕ:27-04-2015<br>ಮತ್ತು<br>ಆಕುಕ 202 ಆರ್‌ಜಿಯು/2015, ದಿನಾಂಕ:19-06-2015ರ ಪತ್ರದಲ್ಲಿ ಬೋಧಕ ವೈದ್ಯಕೀಯ ಆಸ್ಪತ್ರೆಗಳ ನಿರ್ದೇಶಕರು ಹಾಗೂ ಆಸ್ಪತ್ರೆಯ ಮೆಡಿಕಲ್ ಸೂಪರಿಂಟೆಂಡೆಂಟ್‌ರವರ ಅಭಿಪ್ರಾಯ ಪಡೆದು ಸಂಸ್ಥೆಯ ಆಡಳಿತ ಮಂಡಳಿ ಸಭೆಯಲ್ಲಿ ಅನುಮೋದನೆ ಪಡೆದು ನಂತರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ನಿರ್ದೇಶನವಿರುತ್ತದೆ.<br>ಸರ್ಕಾರದ ನಿರ್ದೇಶನದಂತೆ ಬೋಧಕ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರು, ತಮ್ಮ ಪತ್ರ ಸಂಖ್ಯೆ:ಎಸ್.ಸಿ.ಹೆಚ್/ಅಭಿ/14-15, ದಿನಾಂಕ:23-11-2015ರ ಪತ್ರದಲ್ಲಿ ಹೊಸ ಆಸ್ಪತ್ರೆ |



ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ.ಸಂ. | ವಿಷಯ | ತೀರ್ಮಾನ |
|---|---|---|
| | | ಮತ್ತು ಹಳೆ ಆಸ್ಪತ್ರೆಗಳು ಸೇರಿದಂತೆ ಒಟ್ಟು 750 ಹಾಸಿಗೆಗಳ ಸೌಲಭ್ಯವಿದ್ದು, ರೋಗಿಗಳ ಸಂಖ್ಯೆ ಸಹ ಹೆಚ್ಚು ಇರುತ್ತದೆ. ಹಾಸನ ಮತ್ತು ಹೊಳೆನರಸೀಪುರ ನರ್ಸಿಂಗ್ ವಿದ್ಯಾರ್ಥಿಗಳು ಕ್ಲಿನಿಕಲ್ ಸೌಲಭ್ಯಕ್ಕಾಗಿ ಬರುತ್ತಿದ್ದು ಮೇಲ್ಕಂಡ 03 ಸಂಸ್ಥೆಗಳಿಗೆ ಕ್ಲಿನಿಕಲ್ ಸೌಲಭ್ಯಕ್ಕೆ ಅವಕಾಶ ಮಾಡಿಕೊಡುವುದರಿಂದ ಸದರಿ ವಿದ್ಯಾರ್ಥಿಗಳನ್ನು ಉಪಯೋಗಿಸಿಕೊಂಡು ರೋಗಿಗಳ ಚಿಕಿತ್ಸೆಗೆ ಇನ್ನೂ ಹೆಚ್ಚಿನ ಅನುಕೂಲ ಮಾಡಿಕೊಡಲು ಸಾಧ್ಯವಾಗುತ್ತದೆಂದು ಜೊತೆಗೆ ಸದರಿ ಸಂಸ್ಥೆಗಳಿಂದ ಆಸ್ಪತ್ರೆ ಯೂಸರ್ಸ್ ನಿಧಿಗೆ ಕ್ಲಿನಿಕಲ್ ಶುಲ್ಕವು ಪಾವತಿಯಾಗುತ್ತದೆಂದು ಅಭಿಪ್ರಾಯ ನೀಡಿರುತ್ತಾರೆಂದು ಸಂಸ್ಥೆಯ ನಿರ್ದೇಶಕರು ಸಭೆಯ ಅವಗಾಹನೆಗೆ ತರಲಾಗಿ ಬೋಧಕ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರು ನೀಡಿರುವ ಅಭಿಪ್ರಾಯದ ಮೇರೆಗೆ ಮೇಲ್ಕಂಡ ವೈದ್ಯಕೀಯ ಸಂಸ್ಥೆಗಳಿಗೆ ಕ್ಲಿನಿಕಲ್ ಸೌಲಭ್ಯಕ್ಕೆ ಅನುಮತಿ ನೀಡಬಹುದೆಂದು ತೀರ್ಮಾನಿಸಲಾಯಿತು. |
| 14 | ಸಂಸ್ಥೆಗೆ ಅತಿ ಅವಶ್ಯಕವಿರುವ ಎಲೆಕ್ಟ್ರಿಕಲ್ ಇಂಜಿನಿಯರ್ ಮತ್ತು ಬಯೋಮೆಡಿಕಲ್ ಇಂಜಿನಿಯರ್‌ಗಳನ್ನು ತಾತ್ಕಾಲಿಕವಾಗಿ 11 ತಿಂಗಳ ಅವಧಿಗೆ ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಳ್ಳುವ ಬಗ್ಗೆ. | ಸಂಸ್ಥೆಯ ಆಸ್ಪತ್ರೆಗಳಲ್ಲಿ ರೋಗಿಗಳ ಉಪಯೋಗಕ್ಕಾಗಿ ಅತ್ಯಾಧುನಿಕ ಗುಣಮಟ್ಟದ ಉಪಕರಣಗಳನ್ನು ಅಳವಡಿಸಲಾಗಿರುತ್ತದೆ. ಸದರಿ ಉಪಕರಣಗಳ ನಿರ್ವಹಣೆ, ಎ.ಎಮ್.ಸಿ. ಸಣ್ಣ-ಪುಟ್ಟ ರಿಪೇರಿಗಳನ್ನು ಸಂಸ್ಥೆಯ ಹಂತದಲ್ಲೇ ಮಾಡಿಕೊಳ್ಳಲು ಹಾಗೂ ಉಪಕರಣಗಳಲ್ಲಿ ಯಾವುದಾದರೂ ಲೋಪಗಳು ಕಂಡು ಬಂದ ಸಂದರ್ಭದಲ್ಲಿ ಪರಿಶೀಲಿಸಿ ಸಂಬಂಧಿಸಿದ ಕಂಪನಿಯವರನ್ನು ಕರೆಸಿ ರಿಪೇರಿ ಮಾಡಿಸಲು ಅನುಕೂಲವಾಗುವಂತೆ ಒಂದು ಬಯೋಮೆಡಿಕಲ್ ಇಂಜಿನಿಯರ್ ಹುದ್ದೆ ಮತ್ತು ಹೊಸ ಆಸ್ಪತ್ರೆ ಕಟ್ಟಡದಲ್ಲಿ ಈಗಾಗಲೇ ಸಿ.ಎಸ್.ಎಸ್.ಡಿ, ಘನ ತ್ಯಾಜ್ಯ ವಸ್ತು ನಿರ್ವಹಣೆ ಘಟಕ, ಜನರೇಟರ್‌ಗಳು, ಹೈಡ್ರಾಲಿಕ್ ಸಿಸ್ಟಂ, ಲಿಫ್ಟ್‌ಗಳು, ಹಾಗೂ ಇತ್ಯಾದಿ ಉಪಕರಣಗಳನ್ನು ಅಳವಡಿಸಿದ್ದು ಇವುಗಳನ್ನು ನಿರ್ವಹಿಸಲು ಎಲೆಕ್ಟ್ರಿಕಲ್ ಇಂಜಿನಿಯರ್‌ನ್ನು ನೇಮಿಸಿಕೊಳ್ಳುವಂತೆ ಕೆ.ಹೆಚ್.ಎಸ್.ಡಿ.ಆರ್.ಪಿ ಇಲಾಖೆಯವರು ಲಿಖಿತವಾಗಿ ತಿಳಿಸಿರುತ್ತಾರೆ.<br>ಮುಂದುವರೆದು ಸಂಸ್ಥೆಗೆ ಅವಶ್ಯಕವಿರುವ ಬಯೋಮೆಡಿಕಲ್ ಹುದ್ದೆಯನ್ನು ಸೃಜಿಸುವಂತೆ ಕೋರಿ ಸರ್ಕಾರಕ್ಕೆ ಈ ಕಛೇರಿ ಪತ್ರ ಸಂಖ್ಯೆ: ಹಿಮ್ಸ್/ಸಿ(1)/86/2012-13, ದಿನಾಂಕ:10-10-2013 ಮತ್ತು 24-02-2015ರಂದು ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ. ಸರ್ಕಾರದಿಂದ ಸದರಿ ಹುದ್ದೆಗಳು ಮಂಜೂರಾಗುವವರೆಗೂ ತಾತ್ಕಾಲಿಕವಾಗಿ ಸಂಸ್ಥೆಗೆ ಮಂಜೂರಾಗಿರುವ ಹುದ್ದೆಗಳ ಪೈಕಿ ಬಳಕೆಯಾಗದಿರುವ ಇತರೆ ಹುದ್ದೆಗಳ ಎದುರಿಗೆ ನೇಮಕ ಮಾಡಿಕೊಳ್ಳಲು ಮತ್ತು ಸದರಿ ಹುದ್ದೆಗಳನ್ನು ಬೆಳಗಾಂ ವೈದ್ಯಕೀಯ ವಿಜ್ಞಾನಗಳ |

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ.ಸಂ. | ವಿಷಯ | ತೀರ್ಮಾನ |
|---|---|---|
| | | ಸಂಸ್ಥೆಯಲ್ಲಿ 11 ತಿಂಗಳ ಅವಧಿಗೆ ಗುತ್ತಿಗೆ ಆಧಾರದಲ್ಲಿ ರೂ. 15,000.00 ನಿಗದಿಪಡಿಸಿ ನೇಮಕ ಮಾಡಿಕೊಂಡಿರುತ್ತಾರೆ. ಇದೇ ವಿಧಾನವನ್ನು ಅನುಸರಿಸಲು ಅನುಮೋದನೆ ನೀಡುವಂತೆ ಸಂಸ್ಥೆಯ ನಿರ್ದೇಶಕರು ಸಭೆಯ ಮುಂದೆ ಮಂಡಿಸಿದರು.<br>ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿ ಸಂಸ್ಥೆಯ ಹಿತದೃಷ್ಟಿಯಿಂದ ಅತಿ ಅವಶ್ಯಕವಾಗಿರುವ ಎಲೆಕ್ಟ್ರಿಕಲ್ ಇಂಜಿನಿಯರ್ –01 ಮತ್ತು ಬಯೋಮೆಡಿಕಲ್ ಇಂಜಿನಿಯರ್ –01 ಹುದ್ದೆಗಳನ್ನು ತಾತ್ಕಾಲಿಕವಾಗಿ 11 ತಿಂಗಳ ಅವಧಿಗೆ ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಂಡು ಸದರಿ ಹುದ್ದೆಗಳಿಗೆ ತಲಾ ರೂ.15,000.00ಗಳಂತೆ ಮಾಸಿಕ ಕ್ರೂಢೀಕೃತ ವೇತನ ಪಾವತಿಸುವುದೆಂದು ತೀರ್ಮಾನಿಸಲಾಯಿತು. |
| 15 | ಸಂಸ್ಥೆಯ ಹೊಸ ಆಸ್ಪತ್ರೆಯ ಕಟ್ಟಡದ ಸ್ವಚ್ಛತೆ, ಭದ್ರತೆ ಹಾಗೂ ಇತರೆ ಅವಶ್ಯಕ ಕೆಲಸಗಳಿಗೆ 45 ಅಗತ್ಯ ಕಾರ್ಮಿಕರನ್ನು ಹೆಚ್ಚುವರಿಯಾಗಿ ತೆಗೆದು ಕೊಳ್ಳುವ ಬಗ್ಗೆ. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಮತ್ತು ಸಂಸ್ಥೆಯ ಅಧೀನದಲ್ಲಿ ಬರುವ ಇತರೆ ಸಂಸ್ಥೆಗಳಿಗೆ 2015–16ನೇ ಸಾಲಿಗೆ ಅವಶ್ಯಕವಿರುವ ವಿವಿಧ 299 ಕಾರ್ಮಿಕರನ್ನು ಒಂದು ವರ್ಷದ ಅವಧಿಗೆ ಇ–ಟೆಂಡರ್ ಆಧಾರದಲ್ಲಿ ಈ ಕಛೇರಿ ಪತ್ರ ಸಂಖ್ಯೆ: ಹಿಮ್ಸ್ /ಟಿ.ಎಸ್(ಹೊರಗುತ್ತಿಗೆ)/ಮಾನವ ಸೇವೆ /14/2014–15, ದಿನಾಂಕ:30–04–2015 ಕಾರ್ಯಾದೇಶ ನೀಡಲಾಗಿರುತ್ತದೆ. ಸದರಿ ಕಾರ್ಮಿಕರ ವೇತನ ಮತ್ತು ಸೇವಾ ವೆಚ್ಚ ಸೇರಿ ವಾರ್ಷಿಕ ಒಟ್ಟು ರೂ.3,12,28,375.00 ಗಳಾಗಿರುತ್ತದೆ. (2602364.00 x 12)<br>ದಿನಾಂಕ:16–11–2015ರಿಂದ ಹೊಸ ಆಸ್ಪತ್ರೆ ಕಟ್ಟಡಕ್ಕೆ ರೋಗಿಗಳನ್ನು ಸ್ಥಳಾಂತರಿಸಿದ್ದು ಎರಡು ಆಸ್ಪತ್ರೆ ಕಟ್ಟಡಗಳಲ್ಲೂ ಸಹ ಚಿಕಿತ್ಸಾ ಸೌಲಭ್ಯವನ್ನು ನೀಡುತ್ತಿರುವುದರಿಂದ ಸ್ವಚ್ಛತಾ ಮತ್ತು ಭದ್ರತಾ ಸೇವೆಗಳ ಕೊರತೆ ಉಂಟಾಗಿರುತ್ತದೆ. ಕೆ.ಟಿ.ಟಿ.ಪಿ ಆಕ್ಟ್ 1999–2000ರ ನಿಯಮದಡಿ ಟೆಂಡರ್ ಪರಿಮಿತಿಗಿಂತ ಹೆಚ್ಚುವರಿಯಾಗಿ ಶೇಕಡ 25%ರಷ್ಟನ್ನು ಅಂದರೆ 75 ಕಾರ್ಮಿಕರನ್ನು ತೆಗೆದುಕೊಳ್ಳಲು ಅವಕಾಶ ಇರುವುದರಿಂದ ಅಗತ್ಯಕ್ಕೆ ಅನುಗುಣವಾಗಿ ಪ್ರಸ್ತುತ ವಿವಿಧ 45 ಕಾರ್ಮಿಕರನ್ನು ಹಾಲಿ ಟೆಂಡರ್‌ದಾರರಾದ ಮೆ. ಶ್ರೀ. ಉದ್ಯೋಗ ಎಂಟರ್ ಪ್ರೈಸಸ್, ಬೆಂಗಳೂರು. ಇವರಿಂದ ಟೆಂಡರ್ ಮೂಲಕ ಪಡೆಯಲು ಮತ್ತು ಹೆಚ್ಚುವರಿ 45 ಕಾರ್ಮಿಕರ ವೇತನ ಮತ್ತು ಸೇವಾ ವೆಚ್ಚ ಸೇರಿ ಮುಂದಿನ 4 ತಿಂಗಳ ಅವಧಿಗೆ ರೂ.16,76,888.00ಗಳನ್ನು(4,19,222x4) ಲೆಕ್ಕ ಶೀರ್ಷಿಕೆ 2210 ಯೋಜನೇತರಡಿಯಲ್ಲಿ ಭರಿಸಲು ಅನುಮೋದನೆಗಾಗಿ ಸಂಸ್ಥೆಯ ನಿರ್ದೇಶಕರು ವಿಷಯವನ್ನು ಸಭೆಯ ಮುಂದೆ ಮಂಡಿಸಿದರು.<br>ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿ ಎರಡು ಆಸ್ಪತ್ರೆ ಕಟ್ಟಡಗಳಲ್ಲೂ |



ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ.ಸಂ. | ವಿಷಯ | ತೀರ್ಮಾನ |
|---|---|---|
| | | ಕಾರ್ಯ ನಿರ್ವಹಿಸುತ್ತಿರುವುದರಿಂದ ಸ್ವಚ್ಛತೆ ಮತ್ತು ಭದ್ರತೆ ಹಿತದೃಷ್ಟಿಯಿಂದ ಹೆಚ್ಚುವರಿಯಾಗಿ ವಿವಿಧ 45 ಕಾರ್ಮಿಕರನ್ನು ನಿಯಮಾನುಸಾರ ತೆಗೆದುಕೊಳ್ಳುವುದೆಂದು ಹಾಗೂ ಮೇಲ್ಕಂಡಂತೆ ವೆಚ್ಚವನ್ನು ಭರಿಸಲು ತೀರ್ಮಾನಿಸಲಾಯಿತು. |
| 16 | ಹಿಮ್ಸ್ ಸಂಸ್ಥೆಯ ಅಧೀನದಲ್ಲಿರುವ ಹಾಸನ ಮತ್ತು ಹೊಳೆನರಸೀಪುರ ಸರ್ಕಾರಿ ಶುಶ್ರೂಷಾ ಮಹಾವಿದ್ಯಾಲಯಗಳಲ್ಲಿ ಐ.ಎನ್.ಸಿ. ನಿಯಮಾನುಸಾರ ಅಗತ್ಯವಿರುವ ಹೆಚ್ಚುವರಿ ಬೋಧಕರ ಹುದ್ದೆಗಳನ್ನು ಸೃಜಿಸುವ ಬಗ್ಗೆ. | ಸರ್ಕಾರಿ ಶುಶ್ರೂಷ ಮಹಾ ವಿದ್ಯಾಲಯ ಹಾಸನ ಮತ್ತು ಹೊಳೆನರಸೀಪುರ ಈ ಸಂಸ್ಥೆಗಳಿಗೆ ಬಿಎಸ್ಸಿ ನರ್ಸಿಂಗ್ ಕಾಲೇಜ್ ಪ್ರಾರಂಭಿಸಲು ಸರ್ಕಾರದ ಆದೇಶ ಸಂಖ್ಯೆ:ಆಕುಕ 136 ಎಂಪಿಎಸ್ 2006, ಬೆಂಗಳೂರು ದಿನಾಂಕ:17-08-2006ರ ಆದೇಶದಲ್ಲಿ 100 ಪ್ರವೇಶ ಮಿತಿ ಹೊಂದಿರುವ ಹಾಸನ ಸರ್ಕಾರಿ ನರ್ಸಿಂಗ್ ಕಾಲೇಜಿಗೆ 42 ಬೋಧಕ ಹುದ್ದೆಗಳು ಮತ್ತು 60 ಪ್ರವೇಶ ಮಿತಿ ಹೊಂದಿರುವ ಹೊಳೆನರಸೀಪುರ ನರ್ಸಿಂಗ್ ಕಾಲೇಜಿಗೆ 22 ಬೋಧಕ ಹುದ್ದೆಗಳು ಸರ್ಕಾರದಿಂದ ಮಂಜೂರಾಗಿರುತ್ತದೆ. ನಂತರ ಈ ಎರಡು ಕಾಲೇಜುಗಳಿಗೂ ಪಿ.ಪಿ.ಬಿ.ಎಸ್ಸಿ ಮತ್ತು ಎಮ್.ಎಸ್ಸಿ ಕೋರ್ಸ್‌ಗಳನ್ನು ಪ್ರಾರಂಭಿಸಲು ಅನುಮತಿ ದೊರೆತಿದ್ದು ಎಲ್ಲಾ ಕೋರ್ಸ್‌ಗಳನ್ನು ಪ್ರಾರಂಭಿಸಲಾಗಿರುತ್ತದೆ ಐ.ಎನ್.ಸಿ. ನಿಯಮಾನುಸಾರ ಈ ಕಾಲೇಜುಗಳಿಗೆ ಕೆಳಕಂಡಂತೆ ಬೋಧಕ ಹುದ್ದೆಗಳು ಹೆಚ್ಚುವರಿಯಾಗಿ ಅವಶ್ಯಕತೆ ಇರುತ್ತದೆ. ಮತ್ತು ಈ ಹುದ್ದೆಗಳಿಗೆ ವಾರ್ಷಿಕ ರೂ. 161.51 ಲಕ್ಷಗಳ ಆವರ್ತಕ ಅರ್ಥಿಕ ಹೊರೆಯಾಗುತ್ತದೆ. ಅಗತ್ಯ ಹುದ್ದೆಗಳನ್ನು ಸರ್ಕಾರದಿಂದ ಮಂಜೂರಾಗದೆ ಇದ್ದ ಪಕ್ಷದಲ್ಲಿ ಐ.ಎನ್.ಸಿ.ಯ ಮಾನ್ಯತೆ ಪಡೆಯುವುದು ತುಂಬಾ ಕಷ್ಟಕರವಾಗುತ್ತದೆ ಎಂದು ಸಂಸ್ಥೆಯ ನಿರ್ದೇಶಕರು ಸಭೆಯಲ್ಲಿ ವಿಷಯವನ್ನು ಮಂಡಿಸಿದರು. |

| ಕ್ರಮ ಸಂಖ್ಯೆ | ಹುದ್ದೆಗಳ ವಿವರ | ಹಾಸನ ನರ್ಸಿಂಗ್ ಕಾಲೇಜು | ಹೊಳೆನರಸೀಪುರ ನರ್ಸಿಂಗ್ ಕಾಲೇಜು | ಒಟ್ಟು ಮಂಜೂರಾತಿಗೆ ಕೋರಿರುವ ಹುದ್ದೆಗಳ ಸಂಖ್ಯೆ |
|---|---|---|---|---|
| 1 | ಪ್ರಾಧ್ಯಾಪಕರು | 01 | 01 | 02 |
| 2 | ಸಹ ಪ್ರಾಧ್ಯಾಪಕರು/ ರೀಡರ್ | 02 | 02 | 04 |
| 3 | ಸಹಾಯಕಪ್ರಾಧ್ಯಾಪಕರು | 08 | 08 | 16 |
| 4 | ಕ್ಲಿನಿಕಲ್‌ಇನ್ಸ್‌ಪೆಕ್ಟರ್/ ಟ್ಯೂಟರ್ | 10 | 10 | 20 |
| | **ಒಟ್ಟು** | **21** | **21** | **42** |



ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ.ಸಂ. | ವಿಷಯ | ತೀರ್ಮಾನ |
|---|---|---|
| | | ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಐ.ಎನ್.ಸಿಯ ಮಾನ್ಯತೆ ಪಡೆಯುವ ನಿಟ್ಟಿನಲ್ಲಿ ಹೆಚ್ಚುವರಿ ಹುದ್ದೆಗಳನ್ನು ಸೃಜಿಸಲು ಆರ್ಥಿಕ ಇಲಾಖೆಯಿಂದ ಅನುಮೋದನೆ ಪಡೆಯಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವುದೆಂದು ತೀರ್ಮಾನಿಸಲಾಯಿತು. |
| 17 | ಮೆ. ಹೆಚ್.ಎಲ್.ಎಲ್. ಲೈಫ್ ಕೇರ್, ಲಿಮಿಟೆಡ್, ಹೈದ್ರಾಬಾದ್ ಸಹಯೋಗ-ದೊಂದಿಗೆ ಹಿಮ್ಸ್, ಸಂಸ್ಥೆಯಲ್ಲಿ ಜೆನರಿಕ್ ಔಷಧಿ ಮಳಿಗೆಯನ್ನು ಸ್ಥಾಪಿಸುವ ಬಗ್ಗೆ. | ರಾಜ್ಯದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿರುವ ಆಸ್ಪತ್ರೆಗಳಲ್ಲಿ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಒಳಪಡುವ ಆಸ್ಪತ್ರೆಗಳಲ್ಲಿ ಹೆಚ್.ಎಲ್.ಎಲ್.ಲೈಫ್‌ಕೇರ್, ಲಿಮಿಟೆಡ್ ಹೈದ್ರಾಬಾದ್ ಸಹಯೋಗದೊಂದಿಗೆ ಸಂಸ್ಥೆಯಲ್ಲಿ ಜೆನರಿಕ್ ಔಷಧಿ ಮಳಿಗೆಗಳನ್ನು ಆರಂಭಿಸಲು ಮೆ.ಹೆಚ್.ಎಲ್.ಎಲ್. ಲೈಫ್ ಕೇರ್, ಲಿಮಿಟೆಡ್ ಹೈದ್ರಾಬಾದ್ ಸಂಸ್ಥೆಗೆ ಅವಶ್ಯವಿರುವ ಸೂಕ್ತ ಜಾಗ ಮತ್ತು ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡಲು ಕ್ರಮವಹಿಸುವಂತೆ ಸರ್ಕಾರದ ಪತ್ರ ಸಂಖ್ಯೆ:ಆಕುಕ 137 ಹೆಚ್‌ಪಿಸಿ 2014 (ಭಾ-1), ದಿನಾಂಕ:28-09-2015 ಬಂದಿರುವ ನಿರ್ದೇಶನವಿರುತ್ತದೆ.<br>ಹಾಗೂ<br>ಸಂಸ್ಥೆಯಲ್ಲಿ ಪ್ರಸ್ತುತ ಸರ್ಕಾರದ ಆದೇಶ ಸಂಖ್ಯೆ: ಆಕುಕ 477 ಎಮ್.ಎಸ್‌ಎಫ್/ 2011, ದಿನಾಂಕ:20-12-2011ರ ನಿರ್ದೇಶನದಂತೆ, ಸಂಸ್ಥೆಯ ಬೋಧಕ ಆಸ್ಪತ್ರೆಯಲ್ಲಿ ಕೆ.ಎಸ್.ಸಿ.ಸಿ.ಎಫ್. ಬೆಂಗಳೂರು, ಇವರ ಸಹಯೋಗದೊಂದಿಗೆ 25 ವರ್ಷಗಳ ಅವಧಿಗೆ ಜನರಿಕ್ ಡ್ರಗ್ ಮಳಿಗೆ ಪ್ರಾರಂಭಿಸಲು ಕರಾರು ಮಾಡಿಕೊಂಡಿದ್ದು ದಿನಾಂಕ:19-08-2012 ರಿಂದ ಹಳೆ ಆಸ್ಪತ್ರೆ ಕಟ್ಟಡದಲ್ಲಿ ಜನರಿಕ್ ಡ್ರಗ್ಸ್ ಮಳಿಗೆ ಪ್ರಾರಂಭಿಸಿರುವ ವಿಷಯವನ್ನು ಸಂಸ್ಥೆಯ ನಿರ್ದೇಶಕರು ಸಭೆಯಲ್ಲಿ ಮಂಡಿಸಿದರು.<br>ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿ ಹಾಲಿ ಮೆ.ಕೆ.ಎಸ್.ಸಿ.ಸಿ.ಎಫ್. ಬೆಂಗಳೂರವರು ನಡೆಸುತ್ತಿರುವ ಜೆನರಿಕ್ ಮಳಿಗೆಯನ್ನು ಹಳೆಯ ಆಸ್ಪತ್ರೆ ಕಟ್ಟಡದಲ್ಲಿ ಉಳಿಸಿಕೊಳ್ಳುವುದು ಹಾಗೂ ಹೊಸ ಆಸ್ಪತ್ರೆ ಕಟ್ಟಡದಲ್ಲಿ ಹೆಚ್.ಎಲ್.ಎಲ್. ಲೈಫ್ ಕೇರ್, ಲಿಮಿಟೆಡ್, ಹೈದ್ರಾಬಾದ್ ಇವರಿಗೆ ಜೆನರಿಕ್ ಔಷಧಿ ಮಳಿಗೆಗಳನ್ನು ತೆರೆಯಲು ಅನುಮತಿ ನೀಡುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. ಇದರ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಸಂಸ್ಥೆಯ ನಿರ್ದೇಶಕರಿಗೆ ಸೂಚಿಸಿಲಾಯಿತು. |
| 18 | ಯೂಸರ್ಸ್ ನಿಧಿಯಲ್ಲಿ ಸಂಗ್ರಹವಾಗಿರುವ ಹಣವನ್ನುರೋಗಿಗಳಿಗೆ ಅನುಕೂಲವಾಗುವಂತೆ ಉಪಯೋಗಿಸಲು ತಯಾರಿಸಿರುವ ಕ್ರಿಯಾ | ಸಂಸ್ಥೆಯ ಬೋಧಕ ಆಸ್ಪತ್ರೆಯ ರೋಗಿಗಳಿಂದ ಯೂಸರ್ಸ್ ನಿಧಿಗೆ ಸಂಗ್ರಹವಾಗುವ ಚಿಕಿತ್ಸಾ ಶುಲ್ಕವನ್ನು ಪ್ರತ್ಯೇಕ ಬ್ಯಾಂಕ್‌ಖಾತೆ ತೆರೆದು ನಿರ್ವಹಿಸಲಾಗುತ್ತಿದ್ದು, ದಿನಾಂಕ:23-11-2015ರ ಅಂತ್ಯಕ್ಕೆ ಉಳಿತಾಯ ಖಾತೆಯಲ್ಲಿ ರೂ.2,90,00,000.00 ಮತ್ತು ನಿಗದಿತ ಠೇವಣಿ |



ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ.ಸಂ. | ವಿಷಯ | ತೀರ್ಮಾನ |
|---|---|---|
| | ಯೋಜನೆಯನ್ನು ಅನುಮೋದಿಸುವ ಬಗ್ಗೆ. | ರೂಪದಲ್ಲಿ ರೂ.1,00,00,000.00 ಒಟ್ಟು ರೂ.3,90,00,000.00 ಯೂಸರ್ಸ್ ನಿಧಿ ಖಾತೆಯಲ್ಲಿರುತ್ತದೆ. ದಿನಾಂಕ:16-11-2015ರಿಂದ ಜಾರಿಗೆ ಬರುವಂತೆ ಹಳೆಯ ಆಸ್ಪತ್ರೆ ಕಟ್ಟಡದಿಂದ ಹೊಸ ಆಸ್ಪತ್ರೆ ಕಟ್ಟಡಕ್ಕೆ ರೋಗಿಗಳನ್ನು ಸ್ಥಳಾಂತರಗೊಳಿಸಿರುವುದರಿಂದ ಹೊಸ ಆಸ್ಪತ್ರೆ ಕಟ್ಟಡದಲ್ಲಿ ಕೆಲವೊಂದು ಮೂಲಭೂತ ಸೌಕರ್ಯಗಳನ್ನು ಒದಗಿಸುವುದರ ಜೊತೆಗೆ ರೋಗಿಗಳ ಚಿಕಿತ್ಸೆಗೆ ಅನುಕೂಲವಾಗುವಂತೆ ಅತಿ ಅವಶ್ಯಕವಿರುವ ಕೆಲವೊಂದು ಉಪಕರಣ, ಪೀಠೋಪಕರಣ, ಸಣ್ಣ-ಪುಟ್ಟ ಕಾಮಗಾರಿಗಳು, ವೇತನ, ಜೀವ ರಕ್ಷಕ ಔಷಧಿ, ಮಾತ್ರೆಗಳನ್ನು ಖರೀದಿಸಲು ಯೂಸರ್ಸ್ ನಿಧಿಯಿಂದ ಹಣವನ್ನು ಉಪಯೋಗಿಸಿಕೊಂಡು ಕೆ.ಟಿ.ಟಿ.ಪಿ ನಿಯಮ 1999-2000ರನ್ವಯ ಕ್ರಮವಹಿಸಬೇಕಾಗಿರುವ ನಿಟ್ಟಿನಲ್ಲಿ ರೂಪಿಸಿರುವ ಕೆಳಕಂಡ ಕ್ರಿಯಾ ಯೋಜನೆಯನ್ನು ಆಡಳಿತ ಸಭೆಯ ಮುಂದೆ ಸಂಸ್ಥೆಯ ನಿರ್ದೇಶಕರು ಮಂಡಿಸಿದರು. |

| Sl.NO. | ಅಂದಾಜು ವೆಚ್ಚ (Expenditure) | Amount |
|---|---|---|
| 1 | 125 K.V. Generator (Approved By 12th FC) | 1260000.00 |
| 2 | 165 K.V. Generator (Approved By 12th FC) | 1850000.00 |
| 3 | Kitchen Vessel (Approved By 12th FC) | 1026000.00 |
| 4 | Stailess steel 3 Seater Chair (Approved By12th FC) | 800000.00 |
| 5 | Suppling and Fixing of Street Light (Approved By 12th FC) | 345000.00 |
| 6 | Laprascopy Machine (Approved By 12th FC) | 3323000.00 |
| 7 | X-ray and C.R. Machine (Approved By 12th FC) | 2100000.00 |
| 8 | Ambulance (Approved By 12th FC) | 1610000.00 |
| 9 | Cautery Machines (Electro Surgical) | 400000.00 |
| 10 | Defibrilators(Emergency Cardiac Care) | 400000.00 |
| 11 | Arthroscopy Set | 2000000.00 |
| 12 | Eco Cardio Grapy Machine(Cardio Evaluation) | 1300000.00 |



ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ.ಸಂ. | ವಿಷಯ | ತೀರ್ಮಾನ |
|---|---|---|

| | | |
|---|---|---|
| 13 | Centre Fuge Machine 24 tubes -02 Nos each Rs.85000.00 | 170000.00 |
| 14 | Furniture (Tables, Chairs, Almeras & etc.,) | 1000000.00 |
| 15 | Receiption Counter | 200000.00 |
| 16 | Patients utility counter | 300000.00 |
| 17 | Aluminium Partician work of all Depts | 1000000.00 |
| 18 | Equipment Repairs and Maintainance | 200000.00 |
| 19 | Computers and Printers | 1500000.00 |
| 20 | Bio-medical Engineer-1, Electrical Engineer -1, Pharmasist-4, Radiologist -1, Electrician, Plumber and Renumeration of Postmortum Charges [1 year] | 1700000.00 |
| 21 | Life saving Drugs, Emergency durgs, Chemicals and Lab Reagents are used for Emergency purpose | 10000000.00 |
| 22 | Building Repairs and Maintainance | 1000000.00 |
| 23 | Other Expenditures | 800000.00 |
| | **Total** | **34284000.00** |

ರೂ.3,42,84,000.00ಗಳ ವೆಚ್ಚದಲ್ಲಿ ರೂಪಿಸಿದ್ದ ಕ್ರಿಯಾ ಯೋಜನೆಯ ಬಗ್ಗೆ ಕೂಲಂಕಷವಾಗಿ ಸಭೆಯಲ್ಲಿ ಚರ್ಚಿಸಲಾಯಿತು. ಸದರಿ ಕ್ರಿಯಾ ಯೋಜನೆಯ ಪೈಕಿ ಕ್ರಮ ಸಂಖ್ಯೆ: 21ರಲ್ಲಿ ಜೀವರಕ್ಷಕ ಔಷಧಿಗಳು ಮತ್ತು ಕೆಮಿಕಲ್ಸ್ ಖರೀದಿಸಲು ನಿಗದಿಪಡಿಸಿರುವ ರೂ.100.00ಲಕ್ಷ ಮೊತ್ತವು ಸೂಕ್ತವಲ್ಲವೆಂದು ತೀರ್ಮಾನಿಸಿ ಸದರಿ ಮೊತ್ತವನ್ನು ಕಡಿಮೆಗೊಳಿಸುವುದು ಹಾಗೂ ಸಂಸ್ಥೆಯಲ್ಲಿ ದರಪಟ್ಟಿ ಹಾಗೂ ಸ್ಥಳೀಯ ಖರೀದಿ ವಿಧಾನಗಳಿಗೆ ಅವಕಾಶ ನೀಡದೆ ಟೆಂಡರ್ ಮೂಲಕವೇ ಔಷಧಿಗಳನ್ನು ಖರೀದಿಸಲು ಕ್ರಮ ಕೈಗೊಳ್ಳುವಂತೆ ನಿರ್ದೇಶಕರಿಗೆ ಸೂಚಿಸಲಾಯಿತು. ಉಳಿದಂತೆ ಕ್ರಮ ಸಂಖ್ಯೆ:01 ರಿಂದ 23ರವರೆಗಿನ ಕ್ರಿಯಾಯೋಜನೆಗೆ ಅನುಮೋದನೆ ನೀಡಿ ನಿಯಮಾನುಸಾರ ಕ್ರಮವಹಿಸುವುದೆಂದು ತೀರ್ಮಾನಿಸಲಾಯಿತು.



ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ.ಸಂ. | ವಿಷಯ | ತೀರ್ಮಾನ |
|---|---|---|
| 19 | ಸಂಸ್ಥೆಯ ಆವರಣದಲ್ಲಿ ಜೆರಾಕ್ಸ್ ಯಂತ್ರ, ಪೆಟ್ಟಿಗೆ ಅಂಗಡಿ, ತಾಜಾ ಹಣ್ಣಿನ ರಸ ಮಾರಾಟ ಕೇಂದ್ರ ತೆರೆಯಲು ಬರುತ್ತಿರುವ ಮನವಿಗಳ ಬಗ್ಗೆ. | ಸಂಸ್ಥೆಯ ಹೊಸ ಆಸ್ಪತ್ರೆಯ ಕಟ್ಟಡದಲ್ಲಿ ಜೆರಾಕ್ಸ್ ಯಂತ್ರ, ಪೆಟ್ಟಿಗೆ ಅಂಗಡಿ, ತಾಜಾ ಹಣ್ಣಿನ ರಸ ಮಾರಾಟ ಕೇಂದ್ರ ತೆರೆಯಲು ಮನವಿಗಳು ಬರುತ್ತಿದ್ದು ನಿಯಮಾನುಸಾರ ಅಂಗಡಿಗಳನ್ನು ತೆರೆಯಲು ಅವಕಾಶ ಮಾಡಿಕೊಡುವುದರ ಬಗ್ಗೆ ಸಂಸ್ಥೆಯ ನಿರ್ದೇಶಕರು, ಸಭೆ ಮುಂದೆ ಮಂಡಿಸಿದರು. ವಿಷಯವನ್ನು ಕೂಲಂಕುಷವಾಗಿ ಚರ್ಚಿಸಿ ಹೊಸ ಆಸ್ಪತ್ರೆ ಆವರಣದಲ್ಲಿ ಮಳಿಗೆಗಳನ್ನು ನಿರ್ಮಿಸಿದಲ್ಲಿ ಆಸ್ಪತ್ರೆಯ ಸ್ವರೂಪಕ್ಕೆ /ಸೌಂದರ್ಯಕ್ಕೆ ಅಡಚಣೆ ಆಗುವುದರಿಂದ ಕಟ್ಟಡದ ನೆಲ ಮಹಡಿಯಲ್ಲಿ ಉಪಹಾರ ಮಂದಿರಕ್ಕೆ ಮೀಸಲಿಟ್ಟಿರುವ ಸ್ಥಳದಲ್ಲಿ ಪಾರ್ಟಿಷನ್ ಮೂಲಕ ಮಳಿಗೆಗಳನ್ನು ನಿರ್ಮಿಸಿ ಲೋಕೋಪಯೋಗಿ ಇಲಾಖೆಯಿಂದ ಸದರಿ ಮಳಿಗೆಗಳಿಗೆ ಬಾಡಿಗೆಯನ್ನು ನಿಗದಿಪಡಿಸಿ ನಂತರ ಕೆ.ಟಿ.ಪಿ.ಪಿ ನಿಯಮಾನುಸಾರ ಮಳಿಗೆಗಳನ್ನು ಅರ್ಜಿದಾರರಿಗೆ ನೀಡುವುದೆಂದು ತೀರ್ಮಾನಿಸಲಾಯಿತು. |
| 20 | ಹಿಮ್ಸ್, ಸಂಸ್ಥೆಯ 307 ಬೋಧಕೇತರ ಸಿಬ್ಬಂದಿ ನೇಮಕಾತಿ ಸಂಬಂಧ ತ್ರಿಸದಸ್ಯ ಸಮಿತಿ ಸಲ್ಲಿಸಿರುವ ವರದಿಯ ಬಗ್ಗೆ. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಸಂಸ್ಥೆಯ 307 ಬೋಧಕೇತರ ಸಿಬ್ಬಂದಿ ನೇಮಕಾತಿಯಲ್ಲಿ ಅವ್ಯವಹಾರದ ಬಗ್ಗೆ ದಿನಾಂಕ:08-09-2014ರಂದು ನಡೆದ 20ನೇ ಆಡಳಿತ ಮಂಡಳಿ ಸಭೆಯಲ್ಲಿ ವಿಷಯವು ಚರ್ಚಿಸಲ್ಪಟ್ಟಿದ್ದು ಈ ಸಂಬಂಧ<br>1) ಮಾನ್ಯ ಉಪಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, (ವೈದ್ಯಕೀಯ ಶಿಕ್ಷಣ), ಕರ್ನಾಟಕ ಸರ್ಕಾರ, ವಿಕಾಸ ಸೌಧ, ಬೆಂಗಳೂರು.<br>2) ಮಾನ್ಯ ಉಪಕಾರ್ಯದರ್ಶಿಗಳು,ಆರ್ಥಿಕ ಇಲಾಖೆ,ಕರ್ನಾಟಕ ಸರ್ಕಾರ ವಿಧಾನ ಸೌಧ, ಬೆಂಗಳೂರು.<br>3) ಮಾನ್ಯ ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಆನಂದರಾವ್ ವೃತ್ತ, ಬೆಂಗಳೂರು.<br>ಇವರುಗಳ ನೇತೃತ್ವದಲ್ಲಿ ತ್ರಿಸದಸ್ಯ ಸಮಿತಿ ರಚಿಸಿ ಸದರಿ ಸಮಿತಿಯು ನೇಮಕಾತಿಗೆ ಸಂಬಂಧಿಸಿದ ಎಲ್ಲಾ ಹಂತಗಳನ್ನು ಪರಿಶೀಲಿಸಿ ಸಮಿತಿಯು ಸಲ್ಲಿಸುವ ವರದಿಯ ಆಧಾರದ ಮೇಲೆ ಸಂಸ್ಥೆಯ ನಿರ್ದೇಶಕರಿಂದ ಸ್ಪಷ್ಟ ಅಭಿಪ್ರಾಯ ಪಡೆದು ಮುಂದಿನ ಆಡಳಿತ ಮಂಡಳಿ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗುವುದೆಂದು ತೀರ್ಮಾನಿಸಲಾಗಿರುತ್ತದೆ. ಸದರಿ ಆಡಳಿತ ಮಂಡಳಿಯ ತೀರ್ಮಾನದಂತೆ ತ್ರಿಸದಸ್ಯ ಸಮಿತಿಯು ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದ್ದು, ವರದಿಯನ್ನು ಸಭೆಯಲ್ಲಿ ಮಂಡಿಸಿ ಅನುಮೋದಿಸಲಾಯಿತು.<br>ಮುಂದುವರೆದು ಈ ನಿಟ್ಟಿನಲ್ಲಿ ಹಿಮ್ಸ್, ಸಂಸ್ಥೆಯ ಹಿಂದಿನ ನಿರ್ದೇಶಕರಾದ ಡಾ.ಕೆ.ಎಸ್.ಗಂಗಾಧರ ಹಾಗೂ ಇತರೆ ಸಂಬಂಧಿತ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಮೇಲೆ ಇಲಾಖಾ ವಿಚಾರಣೆ ನಡೆಸುವುದೆಂದು ತೀರ್ಮಾನಿಸಲಾಯಿತು. |



ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ.ಸಂ. | ವಿಷಯ | ತೀರ್ಮಾನ |
|---|---|---|
| 21 (ಅ) | ವೈದ್ಯಕೀಯ (ಬೋಧಕೇತರ),ಅರೆ ವೈದ್ಯಕೀಯ ಮತ್ತು ಆಡಳಿತಾತ್ಮಕ ಹುದ್ದೆಗಳ ನೇಮಕಾತಿ ಕುರಿತಾದ ಬೈಲಾದ ನಿಯಮ 20 ಉಪನಿಯಮ 13 ಹಾಗೂ ಉಪನಿಯಮ 15(4) ಮತ್ತು (5)ರ ಅಡಿಯಲ್ಲಿ ಬರುವ ನೇಮಕಾತಿ /ಆಯ್ಕೆ ಪ್ರಕ್ರಿಯೆಗಳನ್ನು ಬದಲಾಯಿಸಿ ಸಂದರ್ಶನವನ್ನು ಹೊರತುಪಡಿಸಿ ಆಯ್ಕೆಯನ್ನು ಸಂಪೂರ್ಣವಾಗಿ ಲಿಖಿತ ಪರೀಕ್ಷೆ/ ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ಮೆರಿಟ್ ಮತ್ತು ರೋಸ್ಟರ್/ ಮೀಸಲಾತಿಯನ್ವಯ ನಿಯಮಾನುಸಾರ ಆಯ್ಕೆ ಮಾಡಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮುಖಾಂತರ ನೇಮಕ ಮಾಡಲು ಅನುಮೋದನೆ ಕೋರುವ ಬಗ್ಗೆ. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಗೌರವ ಮಂಡಳಿಯ ಮೇಲಿನ ಅಂಶಗಳನ್ನು ಪರಿಶೀಲಿಸಲಾಗಿ ಆಯ್ಕೆ ಪ್ರಕ್ರಿಯೆ ಹಾಗೂ ಹುದ್ದೆಗಳನ್ನು ತುಂಬುವ ಪ್ರಕ್ರಿಯೆಯನ್ನು ಹೆಚ್ಚಿನ ಪಾರದರ್ಶಕತೆ ಹಾಗೂ ಯಾವುದೇ ಪ್ರಭಾವ ಇಲ್ಲದೇ ನಿಷ್ಪಕ್ಷಪಾತವಾಗಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಸಂಸ್ಥೆಯಲ್ಲಿ ಭರ್ತಿ ಮಾಡಿಕೊಳ್ಳಲು ಬೈಲಾ ಮೇರೆಗೆ ಸಂದರ್ಶನವನ್ನು ಹೊರತು ಪಡಿಸಿ ಶೇಕಡ 100% ಸ್ಪರ್ಧಾತ್ಮಕ ಅಂಕಗಳನ್ನು ಪರಿಗಣಿಸುವ ಬಗ್ಗೆ ಮೆರಿಟ್ ಮತ್ತು ರೋಸ್ಟರ್ ಮೀಸಲಾತಿಯನ್ವಯ ನಿಯಮಾನುಸಾರ ಆಯ್ಕೆ ಮಾಡಲು ಕರ್ನಾಟಕ ಪರೀಕ್ಷ ಪ್ರಾಧಿಕಾರದವರಿಂದ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸಲು ಅನುಮತಿಸಲಾಗಿದೆ. ಇನ್ನಿತರೆ ವಿಷಯಗಳ ಬಗ್ಗೆ ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977ಅನ್ನು ಪಾಲಿಸುವಂತೆ ನಿರ್ಣಯಿಸಲಾಯಿತು. |
| | ಚರ್ಚಿಸಲು ವಿಷಯಗಳಿಲ್ಲದಿರುವುದರಿಂದ ಸಭೆಯನ್ನು 'ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು', | |

(ಡಾ.ಬಿ.ಸಿ. ರವಿಕುಮಾರ್),
ನಿರ್ದೇಶಕರು ಹಾಗೂ
ಸದಸ್ಯ ಕಾರ್ಯದರ್ಶಿ, ಆಡಳಿತ ಮಂಡಳಿ,
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಹಾಸನ.

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

(ಎಮ್. ಲಕ್ಷ್ಮೀನಾರಾಯಣ) ಭಾ.ಆ.ಸೇ.,
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ, ಕರ್ನಾಟಕ ಸರ್ಕಾರ
ಹಾಗೂ ಉಪಾಧ್ಯಕ್ಷರು,
ಆಡಳಿತ ಮಂಡಳಿ, ಹಿಮ್ಸ್, ಹಾಸನ.

(ಡಾ.ಶರಣಪ್ರಕಾಶ್ ರುದ್ರಪ್ಪ ಪಾಟೀಲ್)
ವೈದ್ಯಕೀಯ ಶಿಕ್ಷಣ ಸಚಿವರು,
ಕರ್ನಾಟಕ ಸರ್ಕಾರ ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ,
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ